ದಿನಾಂಕಃ 07.02.2019 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ಮಾಡಿಸಲಾಯಿತು.

ಮುಖ್ಯ ವಿಚಾರಣೆಃ ಶ್ರೀ.ವಿಆರ್‌ಎಮ್ ವಕೀಲರಿಂದ ಒಂದನೇ ಎದುರುದಾರರ ಪರವಾಗಿ.

ನನ್ನ ಮುಖ್ಯವಿಚಾರಣೆಯಾಗಿ ಹಾಜರುಪಡಿಸಿರುವ ಪ್ರಮಾಣಪತ್ರದಲ್ಲಿ ಬರೆಯಲಾಗಿರುವ ಅಂಶಗಳು ನನಗೆ ತಿಳಿದಿದ್ದು ಸತ್ಯಾಂಶಗಳಿಂದ ಕೂಡಿರುತ್ತವೆ.

ಕಂಪನಿಯ ಪರವಾಗಿ ಹಾಜರಾಗಿ ದಾಖಲೆಗಳನ್ನು ಹಾಜರುಪಡಿಸಿ ಸಾಕ್ಷ್ಯ ನುಡಿಯಲು ಬರೆದುಕೊಟ್ಟಿರುವ ಅಧಿಕಾರ ಪತ್ರವನ್ನು ಹಾಜರುಪಡಿಸಿರುತ್ತೇನೆ ಅದನ್ನು ನಿಆರ್ಃ1 ಎಂದೂ, ಒಂದು ವಾಹನದ ವಿಮಾ ಪಾಲಸಿಯನ್ನು ಹಾಜರುಪಡಿಸಿರುತ್ತೇನ ಅದನ್ನು ನಿಆರ್-2 ಎಂದು ಗುರುತಿಸಲಾಯಿತು.

ಪಾಟೀಸವಾಲುಃ ಶ್ರೀ.ಬಿವೈಆರ್ ವಕೀಲರಿಂದ ಅರ್ಜಿದಾರರ ಪರವಾಗಿ.

ಅಪಘಾತದ ಕುರಿತಂತೆ ನನಗೆ ವೈಯಕ್ತಿಕ ಮಾಹಿತಿ ಇರುವುದಿಲ್ಲ. ದಾಖಲೆಗಳ ಆಧಾರದ ಮೇಲೆ ಸಾಕ್ಷ್ಯ ನುಡಿಯುತ್ತಿದ್ದೇನೆ. ಈ ಪ್ರಕರಣದಲ್ಲಿ ಅಪಘಾತಪಡಿಸಿರುತ್ತದೆ ಎನ್ನಲಾದ ವಾಹನವು ಪಶ್ಚಿಮ ಬಂಗಾಳ ರಾಜ್ಯದ ನೋಂದಣಿ ವಾಹನ ಆಗಿರುತ್ತದೆ ಎಂದರೆ ಸರಿ. ಆಸ್ಪತ್ರೆಯ ಎಮ್‌ಎಲ್‌ಸಿ ರಿಜಿಸ್ಟರ್‌ನಲ್ಲಿ ಅಪಘಾತಪಡಿಸಿದ ವಾಹನವು ಲಾರಿ ಎಂದು ನಮೂದು ಆಗಿರುತ್ತದೆ ಎಂದರೆ ಸರಿ. ಸಾಕ್ಷಿ ಸ್ವತಃ ವಾಹನದ ನಂಬರನ್ನು ತಿಳಿಸಿರುವುದಿಲ್ಲ ಎಂದು ನುಡಿದಿರುತ್ತಾರೆ. ನ್ಯಾಯಾಲಯದಿಂದ ನೋಟೀಸು ಜಾರಿಯಾದ ನಂತರ ನಮ್ಮ ಕಂಪನಿಯಲ್ಲಿ ವಿಮೆ ಹೊಂದಿರುವಂತಹ ವಾಹನದ ಮಾಲೀಕರಿಗೆ ನೊಟೀಸನ್ನು ಜಾರಿ ಮಾಡಲಾಗಿರುತ್ತದೆ. ವಾಹನದ ಮಾಲೀಕರಿಗೆ ನೋಟೀಸನ್ನು ಕಳುಹಿಸಿರುವ ಕುರಿತಂತೆ ಕಚೇರಿಯ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ. ಅಪಘಾತ ಪ್ರಕರಣದಲ್ಲಿ ತನಿಖೆಯನ್ನು ಪೂರ್ಣಗೊಳಿಸಿದ ನಂತರ ಪೋಲೀಸ್ ತನಿಖಾಧಿಕಾರಿಗಳು ನಮ್ಮ ವಿಮಾ ಕಂಪನಿಯಲ್ಲಿ ವಿಮೆ ಮಾಡಿಸಿರುವಂತಹ ವಾಹನದ ಚಾಲಕನ ವಿರುದ್ದ ದೋಷರೋಪಣ ಪಟ್ಟಿ ಸಲ್ಲಿಸಿರುತ್ತಾರೆ ಎಂದರೆ ಸರಿ. ಸಾಕ್ಷಿ ಸ್ವತಃ ಸರಿಯಾದ ತನಿಖೆ ಮಾಡದೇ ದೋಷರೋಪಣ ಪಟ್ಟಿ

ಸಲ್ಲಿಸಿರುತ್ತಾರೆ ಎಂದು ನುಡಿದಿರುತ್ತಾರೆ. ಸರಿಯಾದ ತನಿಖೆ ಮಾಡಿಸಿರುವುದಿಲ್ಲ ಎನ್ನುವ ಕುರಿತಂತೆ ದೋಷರೋಪಣ ಪಟ್ಟಿಯನ್ನು ವಾಹನದ ಮಾಲೀಕರ ಮುಖಾಂತರ ಪ್ರಶ್ನೆ ಮಾಡಿಸಿರುತ್ತೀರಾ ಎಂದರೆ ಮಾಡಿಸಿರುವುದಿಲ್ಲ. ಅರ್ಜಿದಾರರಿಗೆ ಪರಿಹಾರ ಕೊಡುವುದನ್ನು ತಪ್ಪಿಸಿಕೊಳ್ಳಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಒ ಹೇ ಕೇ ಸ ಇದೆ

15ನೇ ಅಪರ ನ್ಯಾಯಾಧೀಶರು
ಮತ್ತು ಎಂಎಸಿಟಿ